# “ಸಂಸ್ಕೃತಮ್–ಸಂಗಣಕಮ್” – ಕಾರ್ಯಾಗಾರ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕರ್ನಾಟಕದ ಸಂಸ್ಕೃತ ಕಾಲೇಜುಗಳಲ್ಲಿರುವ ಅಧ್ಯಾಪಕ ಮತ್ತು ವಿದ್ಯಾರ್ಥಿವೃಂದವು ಹೊಸ ಆವಿಷ್ಕಾರಗಳನ್ನುಪಯೋಗಿಸಿ ಹೊಸ ಪಾಠ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕೆಂಬ ಸದುದ್ದೇಶದಿಂದ ಪ್ರಾಧ್ಯಾಪಕರುಗಳಿಗಾಗಿ ಮೂರು ದಿನಗಳ ‘ಸಂಗಣಕ–ಸಂಸ್ಕೃತಮ್’ ಎನ್ನುವ ಕಾರ್ಯಾಗಾರವನ್ನು 17, 18, 19 ಆಗಸ್ಟ್ 2011ರಂದು ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಆಯೋಜಿಸಿತ್ತು.

ಈ ಕಾರ್ಯಾಗಾರಕ್ಕೆ ಎಲ್ಲ ಕಾಲೇಜುಗಳಿಂದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕವರ್ಗ ಮತ್ತು ಅಪೇಕ್ಷೆಯುಳ್ಳ ಬೇರೆ ಅಭ್ಯರ್ಥಿಗಳು ಸೇರಿ ಒಟ್ಟು 42 ಶಿಕ್ಷಾರ್ಥಿಗಳು ಭಾಗವಹಿಸಿದ್ದರು.

17.08.2011ರ ಬೆಳಿಗ್ಗೆ ಉದ್ಘಾಟನಾಸಮಾರಂಭದಲ್ಲಿ ಉದ್ಘಾಟಕರಾಗಿ ಕುಲಪತಿಗಳು, ಮುಖ್ಯಾತಿಥಿಗಳಾಗಿ ವಿಜಯ ಕಾಲೇಜಿನ ಗಣಕವಿಭಾಗದ ಅಧ್ಯಕ್ಷರಾದ ಡಾ॥ ಕೆ. ಶೇಷಮೂರ್ತಿಯವರು, ಸಭಾಧ್ಯಕ್ಷರಾಗಿ ಪ್ರೊ॥ ಎ. ಹರಿದಾಸ ಭಟ್, ವಿದ್ಯಾಪೀಠದ ಪ್ರಾಚಾರ್ಯರು ಉಪಸ್ಥಿತರಿದ್ದರು.

ವೇದಘೋಷದೊಂದಿಗೆ ಸಮಾರಂಭವು ಆರಂಭವಾಯಿತು. ಕುಲಪತಿಗಳು ಮಾತನಾಡಿ, ಇಂತಹ ಕಾರ್ಯಾಗಾರಕ್ಕೆ ಸಕಲ ಸೌಲಭ್ಯಗಳನ್ನು ನೀಡುವುದಾಗಿ ಹೇಳಿದರಲ್ಲದೇ S.H.M.T. Projectನಂತೆ ಸಂಸ್ಕೃತ–ಕನ್ನಡದ ವಿಷಯದಲ್ಲೂ ಇಂತಹ ಕಾರ್ಯವನ್ನು ಮಾಡುವುದಕ್ಕೆ ಗಮನಹರಿಸಬೇಕು ಎಂದು ಅಭಿಪ್ರಾಯಪಟ್ಟರು.

ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಾಚಾರ್ಯರಾದ ಪ್ರೊ॥ ಎ. ಹರಿದಾಸ ಭಟ್‌ರವರು “ಪೂರ್ಣಪ್ರಜ್ಞ ವಿದ್ಯಾಪೀಠದ ಕುಲಪತಿಗಳಾದ ಪರಮಪೂಜ್ಯ ಶ್ರೀಪಾದರು ಕಂಪ್ಯೂಟರ್ ಸಂಬಂಧಿತ ಕಾರ್ಯಗಳಿಗೆ ಮಹತ್ವವನ್ನು ಕೊಟ್ಟಿದ್ದಾರೆಂದು” ಮನವರಿಕೆ ಮಾಡಿಕೊಟ್ಟರು.

ಮುಖ್ಯಾತಿಥಿಗಳಾಗಿ ಮಾತನಾಡಿದ ಡಾ॥ ಕೆ. ಶೇಷಮೂರ್ತಿಯವರು ಸಂಸ್ಕೃತ ಎಂದರೇನು? ಸಂಸ್ಕೃತ ಭಾಷೆಯ ಮಹತ್ವವೇನು? ಈ ಭಾಷೆಯಿಂದಾಗುವ ಪ್ರಯೋಜನಗಳಾವುವು? ಸಂಸ್ಕೃತ ಹಾಗು ಕಂಪ್ಯೂಟರ್‌ಗೆ ಇರುವ ಸಂಬಂಧವೇನು? ಸಂಸ್ಕೃತದ ಮೇಲೆ ಆಗುತ್ತಿರುವ ಸಂಶೋಧನೆಗಳಾವುವು? ಎನ್ನುವುದರ ಮಾಹಿತಿಯನ್ನು ವಿವರಿಸಿದರು.

ಶಿಬಿರದ ಮೊದಲ ಮಾತಾಗಿ (Key Note Address) ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಶ್ರೀನಿವಾಸ ವರಖೇಡಿಯವರು ಸಂಸ್ಕೃತದ ವಿದ್ವಾಂಸರ ಕರ್ತವ್ಯವೇನು? ಎನ್ನುವುದನ್ನು ತಿಳಿಹೇಳಿದರು. ಮುಖ್ಯವಾಗಿ “ಸಂಸ್ಕೃತದಲ್ಲಿ ಏನಿಲ್ಲ? ಎಲ್ಲವೂ ಇದೆ. ಹಾಗೆಯೇ ಸಂಸ್ಕೃತವು ಒಂದು ವಿಜ್ಞಾನ. ಗಣಿತ ಹಾಗು ವಿಜ್ಞಾನ ವಿಭಾಗಗಳಂತೆ ಸಂಸ್ಕೃತವೂ ಕೂಡ ಕಲಾ (Arts) ವಿಭಾಗದಿಂದ ವಿಜ್ಞಾನ (Science) ವಿಭಾಗಕ್ಕೆ ಹೋಗಬೇಕು. ಅದಕ್ಕಾಗಿ ಎಲ್ಲರೂ ತಮ್ಮ ತನು, ಮನವನ್ನು ಕೇಂದ್ರೀಕರಿಸಬೇಕೆಂದು ಪ್ರೋತ್ಸಾಹಕರ ಮಾತನ್ನಾಡಿದರು.

19.08.2011ರ ಸಾಯಂಕಾಲ 03.30ಕ್ಕೆ ಜರುಗಿದ ಸಮಾರೋಪ ಸಮಾರಂಭದ ದಿವ್ಯಸಾನ್ನಿಧ್ಯವನ್ನು ಪಲಿಮಾರುಮಠದ ಪರಮಪೂಜ್ಯ ಶ್ರೀ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು ವಹಿಸಿದ್ದರು. ಅಧ್ಯಕ್ಷತೆಯನ್ನು ಕುಲಪತಿಗಳು ವಹಿಸಿದ್ದರು. ಮುಖ್ಯಾತಿಥಿಗಳಾಗಿ ಪ್ರೊ. ಪ್ರಹ್ಲಾದಾಚಾರ್ಯರು, ಡಾ. ಅಂಬಾ ಕುಲಕರ್ಣಿ ಹಾಗೂ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನದ ಕಾರ್ಯದರ್ಶಿಗಳಾದ ವಿದ್ವಾನ್ ಯು. ಕೇಶವ ಭಟ್ ಭಾಗವಹಿಸಿದ್ದರು. ಡಾ. ತಿರುಮಲ ಕುಲಕರ್ಣಿಯವರು ಕಾರ್ಯಕ್ರಮದ ನಿರ್ವಹಣೆ ಮಾಡಿದರು.

ಮುಖ್ಯಾತಿಥಿಗಳಾಗಿ ಭಾಷಣ ಮಾಡಿದ ಡಾ. ಅಂಬಾ ಕುಲಕರ್ಣಿಯವರು ಭಾಷಾಕ್ಷೇತ್ರದಲ್ಲಿ ಭಾಷೆ ಹಾಗೂ ತಾಂತ್ರಿಕಪರಿಣತಿ ಹೊಂದಿದ ವಿದ್ವಾಂಸರ ಕೊರತೆಯಿದ್ದು, ಅದನ್ನು ನಿವಾರಿಸಲು ಆಯಾಯಾ ಭಾಷಾವಿದ್ವಾಂಸರೇ ತಾಂತ್ರಿಕಪರಿಣತಿಯನ್ನು ಪಡೆದರೆ ಭಾಷಾಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಲು ಸಾಧ್ಯ ಎಂದು ತಿಳಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಮಾಡುತ್ತಿರುವ ಪ್ರಯತ್ನ ಶ್ಲಾಘನೀಯ ಎಂದರು.
ಪ್ರೊ. ಪ್ರಹ್ಲಾದಾಚಾರ್ಯರು ಮಾತನಾಡಿ ದಕ್ಷಿಣಭಾರತದ ಭಾಷೆಗಳಿಗೆ ಭಾಷಾಂತರ ತಂತ್ರಜ್ಞಾನದ ಅವಶ್ಯಕತೆಯಿದ್ದು, ಅದರ ಬಗ್ಗೆಯೂ ಕೂಡ ವಿಶ್ವವಿದ್ಯಾಲಯವು ಗಮನಹರಿಸಬೇಕೆಂದು ಸಲಹೆಯಿತ್ತರು.

ಮಾನ್ಯ ಕುಲಪತಿಗಳು ಅಧ್ಯಕ್ಷಭಾಷಣವನ್ನು ಮಾಡುತ್ತಾ ಪ್ರೊ. ಪ್ರಹ್ಲಾದಾಚಾರ್ಯರ ಸಲಹೆಯನ್ನು ಸ್ವೀಕರಿಸುತ್ತಾ ಅಂತಹ ಯಾವುದೇ ಕೆಲಸಗಳಿಗೆ ವಿಶ್ವವಿದ್ಯಾಲಯವು ಪ್ರೋತ್ಸಾಹವನ್ನು ಕೊಡುತ್ತದೆ ಮತ್ತು ತಾವೇ ಮುಂದೆ ನಿಂತು ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಂಡರು.

ಪರಮಪೂಜ್ಯ ಶ್ರೀಪಾದಂಗಳವರ ಆಶೀರ್ವಚನ ಮತ್ತು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಕಾರ್ಯಾಗಾರದಲ್ಲಿ ಇಬ್ಬರಿಗೆ ಒಂದರಂತೆ ಕಂಪ್ಯೂಟರನ್ನು ವ್ಯವಸ್ಥೆಗೊಳಿಸಲಾಗಿತ್ತು. ಪ್ರತಿದಿನ ಬೆಳಿಗ್ಗೆ ಹಾಗೂ ಮಧ್ಯಾಹ್ನ ಒಟ್ಟು ಆರು ಗಂಟೆ ಕಾಲ ಕಾರ್ಯಕ್ರಮಗಳು ನಡೆದವು. ದೇಶದ ವಿವಿಧೆಡೆಗಳಿಂದ ಬಂದಿದ್ದ ಪರಿಣತ ವಿದ್ವಾಂಸರು ಉಪನ್ಯಾಸಗಳನ್ನು ನಡೆಸಿಕೊಟ್ಟರು.

ಕಾರ್ಯಾಗಾರದಲ್ಲಿ ಮಾರ್ಗದರ್ಶಕರು ಹೇಳಿದ್ದನ್ನು, ಮಾಡಿ ತೋರಿಸಿದ್ದನ್ನು ಅಭ್ಯರ್ಥಿಗಳು ತಮ್ಮೆದುರಿನ ಕಂಪ್ಯೂಟರಿನಲ್ಲಿ ಮಾಡಿ ನೋಡುತ್ತಿದ್ದರು. ಇ-ಗ್ರಂಥಾಲಯದಲ್ಲಿ ರಾಮಾಯಣ-ಭಾರತಾದಿಗಳಲ್ಲಿ ನಮಗೆ ಬೇಕಾದ್ದನ್ನು ಹುಡುಕುವುದು ಹೇಗೆ ಎಂದು ತಿಳಿದರು. ಸಂಧಿ-ಸಮಾಸ-ಕಾರಕಗಳ ಬಗ್ಗೆ ಸಿದ್ಧವಾಗಿರುವ ವಿವಿಧ ಸಾಫ್ಟ್‌ವೇರುಗಳ ಪರಿಚಯ ಮಾಡಿಕೊಂಡರು. ಸಂಸ್ಕೃತ ಕಂಪ್ಯೂಟರಿಗೆ ಹೇಗೆ ಹತ್ತಿರ ಎಂದು ತಿಳಿದರು. ಅಂತರ್ಜಾಲದಲ್ಲಿ ನಡೆಯುತ್ತಿರುವ ವಿವಿಧ ಉಪಕ್ರಮಗಳಾದ 'ಸಂಸ್ಕೃತ ವಿಕಿಪೀಡಿಯಾ, ಭಾರತೀಯ ವಿದ್ವತ್ ಪರಿಷತ್, ವ್ಯೋಮಸಂಸ್ಕೃತಪಾಠಶಾಲಾ' ಇವೇ ಮುಂತಾದವುಗಳ ಬಗ್ಗೆ ಮಾಹಿತಿ ಪಡೆದರು. 'ಅಷ್ಟಾಧ್ಯಾಯಿಯು ಉನ್ನತಮಟ್ಟದ ಪ್ರೋಗ್ರಾಂ ಆಗಿದೆ' ಎಂಬುದನ್ನು ಉದಾಹರಣೆಯೊಂದಿಗೆ ಮನದಟ್ಟು ಮಾಡಿಕೊಂಡರು.

'ಸಾಗರದಲ್ಲಿ ಅಪಾರ ಜಲವಿದ್ದರೂ ಬಾಯಾರಿದವರಿಗೆ ಒಂದು ಹನಿ ನೀರು ಸಿಗದು. ಅದರಂತೆ ಜಗತ್ತಿನಲ್ಲಿ ಐಟಿ ಕ್ಷೇತ್ರ ಎಷ್ಟೇ ವಿಸ್ತಾರವಾಗಿದ್ದರೂ ಸಂಸ್ಕೃತದವರಿಗೆ ತಮ್ಮ ಅಧ್ಯಯನ-ಅಧ್ಯಾಪನ-ಸಂಶೋಧನದಂತಹ ಕೆಲಸಗಳಿಗೆ ಕಂಪ್ಯೂಟರ್ ಹೇಗೆ ಉಪಯುಕ್ತ ಎಂಬ ಮಾಹಿತಿ ನೀಡುವವರು ವಿರಳ. ಆ ಕೆಲಸ ಈ ಕಾರ್ಯಾಗಾರದಲ್ಲಿ ಆಯಿತು.' ಎಂಬ ಅಭಿಪ್ರಾಯ ಮೂಡಿಬಂತು.